ರಾಯಚೂರು ವಿಶ್ವವಿದ್ಯಾಲಯ RAICHUR UNIVERSITY

ಕೃಷ್ಣ–ತುಂಗ ಆವರಣ, ಮಂತ್ರಾಲಯ ರಸ್ತೆ (ಎನ್.ಹೆಚ್. 167), ಯರಗೇರಾ–584133, ರಾಯಚೂರು, ಕರ್ನಾಟಕ

**ಶೈಕ್ಷಣಿಕ ವಿಭಾಗ**

E-mail: registrarrur@gmail.com Website: https://raichuruniversity.ac.in

ಕ್ರ.ಸಂ. ರಾವಿರಾ/ಶೈಕ್ಷಣಿಕವಿಭಾಗ/2023-24 ದಿನಾಂಕ: 01.04.2023

# ಆದೇಶ

ವಿಷಯ: 2022-23ನೇ ಸಾಲಿನಲ್ಲಿ ಸರ್ಕಾರದ ಕೋಟಾದಡಿ ಹಂಚಿಕೆಯಾಗಿ ಖಾಲಿ ಉಳಿದ /ಉಳಿಯುವ ಬಿ.ಇಡಿ. ಸೀಟುಗಳನ್ನು ಆಡಳಿತ ಮಂಡಳಿಯ ಕೋಟಾದಡಿ ಭರ್ತಿ ಮಾಡಿಕೊಳ್ಳುವ ಕುರಿತು.

ಉಲ್ಲೇಖ : ಸರ್ಕಾರಿ ಆದೇಶ ಸಂಖ್ಯೆ : ಇಡಿ/12/ಯುಜಿಹೆಚ್/2023 ಬೆಂಗಳೂರು, ದಿನಾಂಕ: 28.03.2022.

ರಾಯಚೂರು ವಿಶ್ವವಿದ್ಯಾಲಯದ ಸಂಯೋಜನೆ ಹೊಂದಿರುವ ಮತ್ತು NCTE ಮಾನ್ಯತೆ ಪಡೆದ ಶಿಕ್ಷಣ ಮಹಾವಿದ್ಯಾಲಯಗಳಲ್ಲಿ 2022-23ನೇ ಸಾಲಿಗೆ ಹಂಚಿಕೆಯಾಗದೇ ಸರ್ಕಾರದ ಕೋಟಾದಡಿ (a) ಖಾಲಿ ಇರುವ ಹಾಗೂ (b) ಹಂಚಿಕೆಯಾದ ಸೀಟುಗಳ ಪೈಕಿ ವಿದ್ಯಾರ್ಥಿಗಳು ದಾಖಲಾಗದೇ ಮರುಹಂಚಿಕೆ ಅಥವಾ ಮರುಕೌನ್ಸಿಲಿಂಗ್ ನಂತರವೂ ಖಾಲಿ ಉಳಿದಿರುವ ಬಿ.ಎಡ್ ಸೀಟುಗಳನ್ನು ಆಯಾ ಕಾಲೇಜು ಆಡಳಿತ ಮಂಡಳಿಯವರು ದಿನಾಂಕ: 12.04.2023 ರವರೆಗೆ ಭರ್ತಿ ಮಾಡಿಕೊಂಡು ರಾಯಚೂರು ವಿಶ್ವವಿದ್ಯಾಲಯದ ನಿಯಮಾವಳಿಗಳ ಪ್ರಕಾರ ಪ್ರವೇಶಾತಿ ಪ್ರಕ್ರಿಯೆಯನ್ನು ಕೈಗೊಳ್ಳಲು ಹಾಗೂ ವಿಶ್ವವಿದ್ಯಾಲಯಕ್ಕೆ ವರದಿಸಲ್ಲಿಸಲು ಈ ಕೆಳಕಂಡ ಷರತ್ತು/ನಿಭಂದನೆಗೆ ಒಳಪಟ್ಟು ಅನುಮತಿ ನೀಡಲಾಗಿದೆ.

**ಷರತ್ತು/ ನಿಭಂದನೆಗಳು :**

1. ಸರ್ಕಾರಿ ಕೋಟಾದಡಿ ಹಂಚಿಕೆಯಾಗದೇ ಖಾಲಿ ಉಳಿದಿರುವ ಸೀಟುಗಳು ಹಾಗೂ ಹಂಚಿಕೆಯಾದ ಸೀಟುಗಳ ಪೈಕಿ ವಿದ್ಯಾರ್ಥಿಗಳು ದಾಖಲಾಗದೇ ಮರುಹಂಚಿಕೆ ಅಥವಾ ಮರುಕೌನ್ಸಿಲಿಂಗ್ ನಂತರವು ಖಾಲಿ ಉಳಿದಿರುವ ಸೀಟುಗಳ ಸಂಖ್ಯೆಗಳ ನೈಜತೆ ಹಾಗೂ ನಿಖರತೆ ಕೇಂದ್ರೀಕೃತ ದಾಖಲಾತಿ ಘಟಕದ ಅಂಕಿ-ಅಂಶಗಳನ್ನು ಆಧರಿಸಿರತಕ್ಕದ್ದು, ಅಂದರೇ ಈ ಸಂಬಂಧದಲ್ಲಿ ಕೇಂದ್ರೀಕೃತ ದಾಖಲಾತಿ ಘಟದ ಅಂಕಿ-ಅಂಶಗಳೇ ಅಂತಿಮ;
2. ನೈಜ ಖಾಲಿ ಸೀಟುಗಳನ್ನು ಮೀರಿ ಭರ್ತಿಮಾಡಿಕೊಳ್ಳಲಾಗುವ ದಾಖಲಾತಿಗಳನ್ನು ಮಾನ್ಯ ಮಾಡಲಾಗುವುದಿಲ್ಲ.
3. ಸರ್ಕಾರಿ ಕೋಟಾದಡಿ ಖಾಲಿ ಉಳಿದ ಸೀಟುಗಳನ್ನು ಭರ್ತಿ ಮಾಡುವ ಮೊದಲು ಸಂಪೂರ್ಣ ವಿವರವನ್ನು ನೀಡಿ ವಿಶ್ವವಿದ್ಯಾಲಯದ ಪರವಾನಿಗೆಯನ್ನು ಪಡೆಯತಕ್ಕದ್ದು ಇಲ್ಲವಾದಲ್ಲಿ ವಿಶ್ವವಿದ್ಯಾಲಯವು ಅಂತಹ ದಾಖಲೆಗಳನ್ನು ಮಾನ್ಯ ಮಾಡುವದಿಲ್ಲ.
4. ಸರ್ಕಾರ ಮತ್ತು ರಾಯಚೂರು ವಿಶ್ವವಿದ್ಯಾಲಯ ನಿಗದಿಪಡಿಸಿದ ಶುಲ್ಕವನ್ನು ಮಾತ್ರ ತೆಗೆದುಕೊಳ್ಳತಕ್ಕದ್ದು.
5. ಸರ್ಕಾರದ ಕೋಟಾದಡಿ ಖಾಲಿ ಉಳಿದಿರುವ ಸೀಟುಗಳನ್ನು ಕರ್ನಾಟಕ ರಾಜ್ಯದ ವಿದ್ಯಾರ್ಥಿಗಳಿಗೆ ಮಾತ್ರ ಕಡ್ಡಾಯವಾಗಿ ಮೀಸಲಿಡತಕ್ಕದ್ದು; ಒಂದು ವೇಳೆ ಕರ್ನಾಟಕ

ರಾಜ್ಯದ ವಿದ್ಯಾರ್ಥಿಗಳು ಲಭ್ಯವಾಗದ ಅನಿವಾರ್ಯ ಹಾಗೂ ವಿರಳ ಸಂದರ್ಭಗಳಲ್ಲಿ ಮಾತ್ರ ಹತ್ತು ವರ್ಷಗಳಿಗೆ ಕಡಿಮೆ ಇರದ ಅವಧಿಯಿಂದ ಕರ್ನಾಟಕದಲ್ಲಿ ವಾಸಿಸುತ್ತಿರುವ ಅನ್ಯ ರಾಜ್ಯದ ವಿದ್ಯಾರ್ಥಿಗಳನ್ನು ಪರಿಗಣಿಸಬಹುದಾಗಿದ್ದು, ಹತ್ತು ವರ್ಷಗಳಿಗೆ ಕಡಿಮೆ ಇರದ ಅವಧಿಯಿಂದ ವಾಸಿಸುತ್ತಿರುವುದಕ್ಕೆ ಪೂರಕವಾಗಿ ದಾಖಲೆಗಳನ್ನು ಸಂಬಂಧಿಸಿದ ವಿಶ್ವವಿದ್ಯಾಲಯಗಳಿಗೆ ಸಲ್ಲಿಸತಕ್ಕದ್ದು.

6. ಸದರೀ ಸರ್ಕಾರಿ ಕೋಟಾದಡಿ ಪ್ರವೇಶಾತಿಯನ್ನು ದಿನಾಂಕ: 12.04.2023 ರೊಳಗಾಗಿ ಪೂರ್ಣಗೊಳಿಸುವುದು.
7. ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ ಈಗಾಗಲೇ ತರಗತಿಗಳು ಪ್ರಾರಂಬವಾಗಿದ್ದರೇ ಈಗಾಗಲೇ ಕಲಿಸಲಾಗಿರುವ ಪಾಠಗಳನ್ನು ವಿಶೇಷ ತರಗತಿಗಳನ್ನು ಏರ್ಪಡಿಸಿ ಪಠ್ಯಕ್ರಮವನ್ನು ಪೂರ್ಣಗೊಳಿಸುವುದು.
8. ಹೈದರಾಬಾದ್-ಕರ್ನಾಟಕ (ಕಲ್ಯಾಣ ಕರ್ನಾಟಕ) ಮೀಸಲಾತಿ ಸೀಟುಗಳನ್ನು ನಯಮಾನುಸಾರ ಭರ್ತಿ ಮಾಡತಕ್ಕದ್ದು.

## Fee Structure for First year B.Ed. (I & II Semester) course for the Academic year 2022-23

| Sl.No. | Fee Structure/events | Fee within the State Rs. | Fee outside the State Rs. |
|---|---|---|---|
| 1 | Eligibility Processing Fees | 100.00 | 100.00 |
| 2 | Eligibility Fees | 5920.00 | 15200.00 |
| 3 | Registration Fee | 1875.00 | 2295.00 |
| 4 | Sports Fee | 160.00 | 160.00 |
| 5 | Copurs Fee | 800.00 | 800.00 |
| 6 | Cultural Activities Fee | 180.00 | 180.00 |
| 7 | Student Safety Fee | 50.00 | 50.00 |
| 8 | NSS Fund | 200.00 | 200.00 |
| 9 | Career Guidance Fee | 140.00 | 140.00 |
| 10 | Scouts & Guides Fee | 50.00 | 50.00 |
| 11 | Red Cross Fee | 50.00 | 50.00 |
| 12 | Relief Fund | 25.00 | 25.00 |
| 13 | Fee for converting Govt. to Management quota. | 3000.00 | 3000.00 |
| | **Total** | **12250.00** | **12250.00** |

(ಪ್ರೊ. ವಿಶ್ವನಾಥ ಎಂ.)
ಕುಲಸಚಿವರು
ರಾಯಚೂರು ವಿಶ್ವವಿದ್ಯಾಲಯ, ರಾಯಚೂರು

ಗೆ,
ಎಲ್ಲಾ ಸಂಯೋಜಿತ ಶಿಕ್ಷಣ ಮಹಾದ್ಯಾಲಯಗಳ ಪ್ರಾಂಶುಪಾಲರುಗಳಿಗೆ,
ರಾಯಚೂರು ವಿಶ್ವವಿದ್ಯಾಲಯ, ರಾಯಚೂರು.

**ಪ್ರತಿ:**
1) ಕುಲಸಚಿವರು (ಮೌಲ್ಯಮಾಪನ), ರಾಯಚೂರು ವಿಶ್ವವಿದ್ಯಾಲಯ, ರಾಯಚೂರು.
2) ಯುಯುಸಿಎಂಎಸ್ ನೋಡಲ್ ಅಧಿಕಾರಿಗಳು, ರಾ.ವಿ.ರಾ.
3) ಮುಖ್ಯಸ್ಥರು ಗಣಕ ಯಂತ್ರ ವಿಭಾಗ, ರಾಯಚೂರು ವಿಶ್ವವಿದ್ಯಾಲಯ, ರಾಯಚೂರು.
4) ಕುಲಪತಿಗಳ ಆಪ್ತ ಕಾರ್ಯಾದರ್ಶಿ/ಕುಲಸಚಿವರ ಆಪ್ತ ಸಹಾಯಕ, ರಾ.ವಿ.ರಾ.
5) ಕಚೇರಿ ಪ್ರತಿ